ವಿಜಯವಾಣಿ ನಂ 1

## ಹಲವು ಕ್ರೀಡೆಗಳಲ್ಲಿ ಪದಕಗಳಿಗೆ ಭಾಜನ | ನಗದು ಬಹುಮಾನ ವಿತರಣೆ

# ಆರ್.ವಿ. ಕಾಲೇಜಿನ ಕ್ರೀಡಾ ಸಾಧಕರಿಗೆ ಸನ್ಮಾನ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಆರ್.ವಿ. ಇಂಜಿನಿಯರಿಂಗ್ ಕಾಲೇಜಿನ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗವು ಸೋಮವಾರ ಹಮ್ಮಿಕೊಂಡಿದ್ದ 'ಕ್ರೀಡಾ ಸಾಧಕರ ದಿನಾಚರಣೆ'ಯಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆ 2021-22ರಲ್ಲಿ 2ನೇ ಸ್ಥಾನ ಪಡೆದಿದೆ. 2022-23ನೇ ಸಾಲಿನಲ್ಲಿಯೂ ತನ್ನ ಸ್ಥಾನವನ್ನು ಉಳಿಸಿಕೊಳ್ಳುವ ಭರವಸೆ ಹೊಂದಿದೆ.

ಪುರುಷರ ಬಾಸ್ಕೆಟ್‌ಬಾಲ್, ಕ್ರಿಕೆಟ್, ಚೆಸ್, ಖೋ ಖೋ, ನೆಟ್ ಬಾಲ್ ಮತ್ತು ಟೆನಿಸ್, ಮಹಿಳೆಯರ ಬಾಸ್ಕೆಟ್‌ಬಾಲ್, ಹ್ಯಾಂಡ್ ಬಾಲ್ ತಂಡಗಳು ವಿಜೇತವಾಗಿವೆ. ಪುರುಷರ ವಾಲಿಬಾಲ್, ಹಾಕಿ, ಹ್ಯಾಂಡ್‌ಬಾಲ್, ಬ್ಯಾಡ್ಮಿಂಟನ್ ಮತ್ತು ಮಹಿಳೆಯರ ಕ್ರಾಸ್ ಕಂಟ್ರಿ, ಬ್ಯಾಡ್ಮಿಂಟನ್ ತಂಡಗಳು ರನ್ನರ್ಸ್ ಅಪ್ ಆಗಿವೆ.

ವಿಟಿಯು ಅಂತರ ವಿಶ್ವವಿದ್ಯಾಲಯ ಚಾಂಪಿಯನ್‌ಶಿಪ್‌ನಲ್ಲಿ ಕಾಲೇಜಿನ 6 ವಿದ್ಯಾರ್ಥಿಗಳು ಕರ್ನಾಟಕವನ್ನು ಪ್ರತಿನಿಧಿಸಿದ್ದರು. ವಿವಿಧ ಆಟೋಟಗಳಲ್ಲಿ ಕಾಲೇಜಿನ 32 ವಿದ್ಯಾರ್ಥಿಗಳು 2 ಚಿನ್ನ, 4 ಬೆಳ್ಳಿ ಮತ್ತು 2 ಕಂಚಿನ ಪದಕಗಳನ್ನು ಪಡೆದುಕೊಂಡಿದ್ದಾರೆ. ವೈಯಕ್ತಿಕ ವಿಭಾಗದಲ್ಲಿಯೂ 6 ವಿನ್ನರ್ಸ್ ಮತ್ತು 11 ರನ್ನರ್ಸ್ ಪದಕಗಳು ಕಾಲೇಜಿನ ವಿದ್ಯಾರ್ಥಿಗಳ ಪಾಲಾಗಿದೆ.

ವಿಜಯವಾಣಿ



**ಸಾಧಕ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಡಾ. ಕೆ.ಎನ್. ಸುಬ್ರಮಣ್ಯ, ಡಾ. ಎಸ್.ಸಿ. ಪ್ರಸನ್ನಕುಮಾರ್, ಡಾ. ಕೆ.ಎಸ್. ಗೀತಾ, ಡಾ. ಸಿ.ಎನ್. ವಿಶ್ವನಾಥ್ ಉಪಸ್ಥಿತರಿದ್ದರು.**

ಕರ್ನಾಟಕವನ್ನು ಪ್ರತಿನಿಧಿಸಿದ ವಿದ್ಯಾರ್ಥಿಗಳಿಗೆ 3 ಸಾವಿರ ರೂ. ನಗದು ಬಹುಮಾನ, ವಿಟಿಯು ಪ್ರತಿನಿಧಿಸಿದವರಿಗೆ 2 ಸಾವಿರ ರೂ., ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ವಿಜೇತರಿಗೆ ಕ್ರಮವಾಗಿ 1,000, 750 ಮತ್ತು 500 ರೂ. ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಕ್ರೀಡಾ ವಿಭಾಗದ ಪ್ರಧಾನ ಕಾರ್ಯದರ್ಶಿ ಡಾ. ಎಸ್.ಸಿ. ಪ್ರಸನ್ನಕುಮಾರ್, ಉಪ ಪ್ರಾಂಶುಪಾಲ ಡಾ. ಕೆ.ಎಸ್. ಗೀತಾ, ದೈಹಿಕ ಶಿಕ್ಷಣ ನಿರ್ದೇಶಕ ಡಾ. ಸಿ.ಎನ್. ವಿಶ್ವನಾಥ ಮತ್ತು ಸಹಾಯಕ ನಿರ್ದೇಶಕಿ ಮೀನಾಕ್ಷಿ ಮುತಾಲಿಕ್ ದೇಸಾಯಿ ಉಪಸ್ಥಿತರಿದ್ದರು.

> **ಕ್ರೀಡಾ ವಿಭಾಗದ ಸಾಧಕರು ವಿದ್ಯಾಭ್ಯಾಸದ ನಂತರವೂ ತಮ್ಮ ಕ್ರೀಡಾ ಚಟುವಟಿಕೆಗಳನ್ನು ಕ್ರೀಡಾಂಗಣದಲ್ಲಿ ಅಥವಾ ವಿಶ್ಲೇಷಣೆಗಳ ಮೂಲಕ ಮುಂದುವರಿಸುವ ಮೂಲಕ ದೊಡ್ಡ ಮಟ್ಟದಲ್ಲಿ ಕ್ರೀಡೆಗೆ ಕೊಡುಗೆ ನೀಡಲು ಶ್ರಮಿಸಿ.**
>
> | **ಡಾ. ಕೆ.ಎನ್. ಸುಬ್ರಮಣ್ಯ**
> **ಪ್ರಾಂಶುಪಾಲ**